INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,30-34
Peer Reviewed Journal, Referred Journal

# ಒನಕೆಬೆಟ್ಟದಲ್ಲಿ ಶಿಲಾಯುಗ ಸಂಸ್ಕೃತಿಯ ಮಾನವ ನಿರ್ಮಿತ ಕುಳಿಗಳ ಶೋಧ.

**ಡಾ.ಎಸ್.ಜಿ.ರಾಮದಾಸರೆಡ್ಡಿ.**[1]


ಶಿಲಾಯುಗದ ಮಾನವನು ತನ್ನ ದೈನಂದಿನ ಜೀವನಕ್ಕಾಗಿ ಬೆಟ್ಟ,ಗುಡ್ಡ,ನದಿ,ಹಳ್ಳ, ಕೊಳ್ಳ ಹಾಗೂ ಸಮತಟ್ಟಾದ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದನು.ವಾಸಕ್ಕಾಗಿ ಅಲ್ಲಿಯ ವಿಶಾಲವಾದ ಭೂಭಾಗದಲ್ಲಿ ನೈಸರ್ಗಿಕವಾಗಿ ದೊರೆಯುವ ಕಲ್ಲಾಸರೆ, ಗವಿಗಳನ್ನು, ಸ್ಥಳಿಯವಾಗಿ ದೊರೆಯುವ ಕಲ್ಲು, ಬಂಡೆಗಳನ್ನು ಹಾಗೂ ಕಾಡು ಪ್ರಾಣಿಗಳ (ಮ್ಯಮಾತ್ ಪ್ರಾಣಿ) ಮೂಳೆಗಳನ್ನು ಬಳಸಿ ಗುಡ್ಡಗಳ ಮೇಲೆ, ಸಮತಟ್ಟಾದ ಸ್ಥಳದಲ್ಲಿ ಗುಡಿಸಲು ನಿರ್ಮಿಸಿ ಕೊಳ್ಳುತ್ತಿದ್ದನು ಹಾಗೂ ಎತ್ತರವಾದ ಸ್ಥಳದಲ್ಲಿ ಮತ್ತು ಸಮತಟ್ಟಾದ ಭೂಭಾಗದಲ್ಲಿ ಗುಡಿಸಲು ನಿರ್ಮಿಸಲು ಕುಳಿಗಳನ್ನು ನಿರ್ಮಿಸಿ ಗುಡಿಸಲು ನಿರ್ಮಿಸಿ ಕೊಳ್ಳುತ್ತಿದ್ದನು. ಈ ನಿಟ್ಟಿನಲ್ಲಿ ಒನಕೆಬೆಟ್ಟವನ್ನು ಸಂಶೋಧನೆಗೆ ಒಳಪಡಿಸಿದಾಗ ಕುಂತಿ ಬೆಟ್ಟದ ಪಕ್ಕದಲ್ಲೇ ಇರುವ ಒನಕೆ ಬೆಟ್ಟದ ಮೇಲೆ ವಿಶಾಲವಾದ ಬಂಡೆಯ ಮೇಲೆ ನಿರ್ಮಿಸಿದ ಮಾನವ ನಿರ್ಮಿತ ಕುಳಿಗಳು ಶೋಧವಾದವು.

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನಿಂದ 4 ಕಿ.ಮೀ ದೂರದಲ್ಲಿ ಕುಂತಿಬೆಟ್ಟವಿದೆ. ಈ ಬೆಟ್ಟದ ಪಕ್ಕದಲ್ಲೇ ಒನಕೆಬೆಟ್ಟವಿದೆ. ಬೆಟ್ಟವು ಸಮುದ್ರ ಮಟ್ಟದಿಂದ 2882 ಅಡಿ ಎತ್ತರವಿದೆ.ಈ ಬೆಟ್ಟದ ತುದಿಯಲ್ಲಿ ವಿಶಾಲವಾದ ಭೂಪ್ರದೇಶವಿದೆ. ಇಲ್ಲಿ 25 ಅಡಿ ಎತ್ತರದ ಮಾನವ ನಿರ್ಮಿತ ಏಕಶಿಲಾ ಕಲ್ಲಿನ ಕಂಬವಿದೆ. ಇದನ್ನು ಒನಕೆ ಕಂಬವೆಂದು, ಮಾನಸ್ಥಂಭವೆಂದು ಸ್ಥಳೀಯರು ಕರೆಯುತ್ತಾರೆ (ಇಂದು 4 ತುಂಡುಗಳಾಗಿ ಬಿದ್ದಿದೆ.)ಈ ಕಂಬದ ಸುತ್ತಮುತ್ತಲೂ ಗವಿಗಳು, ಕಲ್ಲಾಸರೆಗಳು,ಇಳಿಜಾರಾದ ಭೂಪ್ರದೇಶವಿದೆ.

ಕುಂತಿಬೆಟ್ಟದ ಪರಿಸರದಲ್ಲಿ ಮೊಟ್ಟ ಮೊದಲ ಭಾರಿಗೆ ರಾಬರ್ಟ್‌ಬ್ರೂಸಿಫುಟ್‌ರವರು ನಂತರ ಎಂ.ಎಸ್.ಕೃಷ್ಣಮೂರ್ತಿ ಇವರು ಈ ಬೆಟ್ಟದ ಕೆಳಭಾಗದಲ್ಲಿ ಸಂಶೋಧನೆ ಮಾಡಿ ಶಿಲಾಯುಗದ ಮಾನವನ ಅವಶೇಷಗಳನ್ನು ಶೋಧಿಸಿದ್ದರು, ನಂತರ ಡಾ.ಎಸ್.ಜಿ.ರಾಮದಾಸರೆಡ್ಡಿ ಅವರು ಕುಂತಿ

[1] . ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

ಬೆಟ್ಟದ ಮೇಲೆ ಮೊಟ್ಟ ಮೊದಲ ಬಾರಿಗೆ ಶಿಲಾಯುಗದ ಮಾನವನ ಅವಶೇಷಗಳನ್ನು ಶೋಧಿಸಿದ್ದಾರೆ. ನಂತರ ಇದೇ ಸಂಶೋಧಕರು ಕುಂತಿಬೆಟ್ಟದ ಪಕ್ಕದಲ್ಲೇ ಇರುವ **ಒನಕೆಬೆಟ್ಟದಲ್ಲಿ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಮೊಟ್ಟ ಮೊದಲ ಭಾರಿಗೆ ಶೋಧಿಸಿದ್ದಾರೆ**.



ಪ್ರಸ್ತುತ ನನ್ನ ಕ್ಷೇತ್ರಕಾರ್ಯದಲ್ಲಿ ಮಧ್ಯಹಳೆಶಿಲಾಯುಗ, ಅಂತ್ಯಹಳೆ ಶಿಲಾಯುಗ, ಸೂಕ್ಮಶಿಲಾಯುಗ ಸಂಸ್ಕ್ರತಿಯ ಕಲ್ಲಿನಾಯುಧಗಳು, ನವಶಿಲಾಯುಗ ಸಂಸ್ಕೃತಿಯ ಮಾನವನು ಗುಡಿಸಲು ನಿರ್ಮಿಸಿಕೊಳ್ಳಲು ಮಾಡಿಕೊಂಡಿರುವ ಕುಳಿಗಳು ಹಾಗೂ ಅವಶೇಷಗಳು ಶೋಧವಾಗಿವೆ ಹಾಗೂ ಬೃಹತ್ ಶಿಲಾಯುಗದ ನೆಲೆ ಪತ್ತೆಯಾಗಿದೆ. ಬೆಟ್ಟದ ಮೇಲೆ ವಿವಿಧ ಸಂಸ್ಕೃತಿಗಳ ಮಾನವನ ವಾಸದ ನೆಲೆಗಳು ಕರ್ನಾಟಕದಲ್ಲಿಯೇ ಇರುವ ಕೆಲವೇ ಅಪರೂಪವಾದ ನೆಲೆಗಳಲ್ಲಿ ಪ್ರಮುಖವಾದ ಶೋಧವಾಗಿವೆ.

ಇತಿಹಾಸ ಪ್ರಸಿದ್ಧ ಒನಕೆ ಬೆಟ್ಟದ ಮೇಲೆ ಮಧ್ಯಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ಮಾನವನು ಬಳಸಿ ಬಿಟ್ಟು ಹೋದ ಆಯುಧಗಳಾದ ಮೊನೆ, ಬ್ಯೂರಿನ್, ಆಯುಧ ತೆಗೆದು ಉಳಿದ ಶಿಲಾಗಟ್ಟಿಗಳು ಶೋಧವಾಗಿವೆ, ಇವು ಸಾಲ್ವಡಗಿ, ಮರಳಬಾವಿ, ಬೆನಹಟ್ಟಿ, ಹುಣಸಗಿ ಶಿಲಾಯುಧಗಳ ಹಾಗೆ ಹೋಲಿಕೆ ಇವೆ.

**ಲೇಖಕರು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ ಪಟ್ಟಿ**

| ಕ್ರ.ಸಂ | ನೆಲೆ | ಜಿಲ್ಲೆ/ತಾಲ್ಲೂಕು | ಮಧ್ಯ ಹಳೇಶಿಲಾಯುಗ | ಅಂತ್ಯಹಳೇ ಶಿಲಾಯುಗ | ಸೂಕ್ಮಶಿಲಾಯುಗ ಸಂಸ್ಕ್ರತಿ | ನವಶಿಲಾಯುಗ ಸಂಸ್ಕೃತಿ | ಬೃಹತ್‌ಶಿಲಾಯುಗ ಸಂಸ್ಕೃತಿ | ಒಟ್ಟು |
|---|---|---|---|---|---|---|---|---|
| 1 | ಒನಕೆ ಬೆಟ್ಟ | ಮಂಡ್ಯ ಜಿಲ್ಲೆ, ಪಾಂಡವಪುರ | ಬ್ಯೂರಿನ್ ಕಲ್ಲಿನಾಯುಧ | ಕಲ್ಲಿನಾಯುಡಗಳು | ಮೊನೆ,ನೀಲಚಕ್ಕೆಚಾಕು, ಚಕ್ಕೆಕಲ್ಲಿನಾಯುಧಗಳು | ಅವಶೇಷಗಳು, ಕಲ್ಲಿನ ಕುಳಿಗಳು | ಅವೇಷಗಳು ದೊರಕಿವೆ. | – |
| | | | ಒಟ್ಟು ನೆಲೆ–01 | ಒಟ್ಟು ನೆಲೆ–01 | ಒಟ್ಟು ನೆಲೆ–01 | ಒಟ್ಟುನೆಲೆ–01 | ಒಟ್ಟು ನೆಲೆ–01 | 05 |




ಸೂಕ್ಷ್ಮಶಿಲಾಯುಗ ಸಂಸ್ಕ್ರತಿಯ ಮಾನವನು ತನ್ನ ದೈನಂದಿನ ಜೀವನಕ್ಕೆ ಅಗತ್ಯವಾಗಿ ಬೇಕಾದ ಸೂಕ್ಷ್ಮಶಿಲಾಯುಧಗಳನ್ನು ಕ್ವಾರ್ಟ್ಜೈಟ್ ಇತರ ಕಲ್ಲುಗಳನ್ನು ಬಳಸಿ ತಯಾರಿಸಿ ಕೊಂಡಿದ್ದಾನೆ. ಮೊನೆ, ನೀಲಚಕ್ಕೆ ಚಾಕು, ಚಕ್ಕೆ ಕಲ್ಲಿನಾಯುಧಗಳು, ಬಳಸಿ ಉಳಿದಿರುವ ಆಯುಧಗಳು, ಚಕ್ಕೆ ತೆಗೆದು ಉಳಿದ ಶಿಲಾಗಟ್ಟಿಗಳು, ಇತರ ಬೆಣಚು ಕಲ್ಲಿನ ತುಂಡುಗಳು ಗುಡ್ಡದ ಮೇಲೆ ಹೇರಳವಾಗಿ ದೊರಕಿವೆ. ಬಳಸಿ

ಉಳಿದಿರುವ ಕಲ್ಲಿನ ಹೆಚ್ಚಿನ ಕಚ್ಚಾಸಾಮಾಗ್ರಿಗಳನ್ನು ನೋಡಿದರೆ ನೆಲೆ **''ಆಯುಧ ತಯಾರಿಕಾ ಕೇಂದ್ರ''ವಾಗಿತ್ತೆಂದು** ಹೇಳಬಹುದು. ಇದೇ ತರಹದ ಹೆಚ್ಚಿನ ಶಿಲಾಯುಧಗಳು ಶ್ರೀರಂಗಪಟ್ಟಣ, ಜಾಲಹಳ್ಳಿ, ಬಾಗಲಕೋಟೆ, ಬೊಮ್ಮನಕುಂಟೆ (ಚಿತ್ರದುರ್ಗ) ನೆಲೆಗಳ ಆಯುಧಗಳ ಹಾಗೆ ಹೋಲಿಕೆಯಿವೆ .

ನವಶಿಲಾಯುಗ ಸಂಸ್ಕೃತಿಯ ಮಾನವನು ತನ್ನ ದೈನಂದಿನ ಜೀವನ ಸಾಗಿಸಲು ಸಾಮಾನ್ಯವಾಗಿ ವಿವಿಧ ಎತ್ತರಗಳಲ್ಲಿ ಕಂಡು ಬರುವ ಗುಡ್ಡಗಳ ಮೇಲೆ, ನದಿಯ ದಡಗಳ ಎತ್ತರದ ಸಮತಟ್ಟಾದ ಪ್ರದೇಶಗಳಲ್ಲಿ ವಾಸಕ್ಕಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡಿರುವುದು ಭೂಸಂಶೋಧನೆಗಳಿಂದ ಶೋಧ ಗೊಂಡಿವೆ.








ಪ್ರಸ್ತುತ ಈ ತರಹದ ನೆಲೆ ಒನಕೆ ಬೆಟ್ಟದ ಮೇಲೆ ಕ್ಷೇತ್ರಕಾರ್ಯದಲ್ಲಿ 2017ರಂದು ನನ್ನ ಕ್ಷೇತ್ರಕಾರ್ಯದಲ್ಲಿ ಶೋಧವಾಯಿತು.ಒನಕೆ ಕಂಬವಿರುವ ಬಲಭಾಗಕ್ಕೆ ಪೂರ್ವ-ಪಶ್ಚಿಮವಾಗಿ 60 ಅಡಿ,



ಉತ್ತರ-ದಕ್ಷಿಣವಾಗಿ 40 ಅಡಿ ವಿಶಾಲವಾಗಿದೆ. ಇಲ್ಲಿಯ ಸಮತಟ್ಟಾದ ಪ್ರದೇಶದಲ್ಲಿ ಉತ್ತರ-ದಕ್ಷಿಣವಾಗಿ ಗುಡ್ಡವನ್ನು ಕೊರೆದು ಕುಳಿಗಳನ್ನು ನಿರ್ಮಿಸಿದ್ದಾರೆ. ಕುಳಿಯಿಂದ ಕುಳಿಗೆ ಪೂರ್ವ-ಪಶ್ಚಿಮ 11.5 ಅಡಿ (ಒಂದು ಕುಳಿಯಿಂದ ಇನ್ನೊಂದು ಕುಳಿಗೆ 5 ಅಡಿ, 6.5 ಅಡಿ ಮೂರು ಕುಳಿಗಳಿವೆ), ಉತ್ತರ-ದಕ್ಷಿಣ 18 ಅಡಿಗಳ (ಒಂದು ಕುಳಿಯಿಂದ ಇನ್ನೊಂದು ಕುಳಿಗೆ 5 ಅಡಿ, 3 ಅಡಿ, 10 ಅಡಿ ) ಕುಳಿಗಳನ್ನು ನಿರ್ಮಿಸಿ ಕೊಂಡಿರುವುವು




ಶೋಧವಾಗಿವೆ. ಒಟ್ಟು 6 ಕುಳಿಗಳಿವೆ. ಈ ಕುಳಿಗಳನ್ನು ಮರದ ಕಂಬಗಳನ್ನು ನೆಟ್ಟು ಗುಡಿಸಲು ನಿರ್ಮಿಸಲು ಮಾಡಿ ಕೊಂಡಿದ್ದಾನೆ. ಕುಳಿಗಳನ್ನು ಗಮನಿಸಿದರೆ ವರ್ತುಲಕಾರದಲ್ಲಿವೆ. ಇವುಗಳನ್ನು ನವಶಿಲಾಯುಗ ಸಂಸ್ಕೃತಿಯ ಮಾನವನು

ಗುಡಿಸಲು ನಿರ್ಮಿಸಿಕೊಳ್ಳಲು ಮಾಡಿ ಕೊಂಡಿದ್ದಾನೆ. ಇದಕ್ಕೆ ಪೂರಕವಾಗಿ ಅಂದಿನ ಮಾನವ ತಾನೂ ಬಳಸಿ ಬಿಟ್ಟು ಹೋದ ಬೂದುಬಣ್ಣದ, ಮಾಸಲು ಕೆಂಪು ಬಣ್ಣದ, ಕಪ್ಪು ಬಣ್ಣದ ಮಡಕೆ ಭಾಗಗಳು, ಎರೆಯುವ ಕಲ್ಲಿನ ಬಿಲ್ಲೆ, ಕಪ್ಪೆಚಿಪ್ಪು ಇತರೆ ಅವಶೇಷಗಳು ಶೋಧವಾಗಿವೆ. ಈ ಕುಳಿಗಳ ಪಕ್ಕದಲ್ಲಿ ಬೃಹತ್ ಬಂಡೆಗಳ ಸಾಲಿದೆ. ಮುಂಭಾಗದಲ್ಲಿ ಗುಹೆಗಳಿವೆ. ಅಂದಿನ ಮಾನವನ ವಾಸಕ್ಕೆ ಯೋಗ್ಯವಾದ ಸ್ಥಳವಾಗಿದೆ. ಈ ನೆಲೆಯನ್ನು ಭೂಸಂಶೋಧನೆಗೆ ಒಳಪಡಿಸಿ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲ ಬೇಕಾಗಿದೆ.

ಒನಕೆಬೆಟ್ಟ ವಿವಿಧ ಸಂಸ್ಕೃತಿಗಳ ನೆಲೆ. ಇದು ಕರ್ನಾಟಕದ ಪ್ರಮುಖ ನೆಲೆಗಳಲ್ಲಿ ಒಂದಾಗಿ ಶೋಧವಾಗಿದೆ. ಇದೇ ತರಹದ ಎತ್ತರವಾದ ಬೆಟ್ಟಗುಡ್ಡಗಳಲ್ಲಿ ಕುಳಿಗಳನ್ನು ಮಾಡಿಕೊಂಡು ಗುಡಿಸಲು ನಿರ್ಮಿಸಿಕೊಂಡ ನೆಲೆಗಳು ಕರ್ನಾಟಕದಲ್ಲಿ ಶೋಧನೆಯಾಗಿವೆ. ಅವುಗಳಲ್ಲಿ ತೆಕ್ಕಲಕೋಟೆ, ಹಳ್ಳೂರು, ಬನಹಳ್ಳಿ, ಸಂಗನಕಲ್ಲು, ತಾವರೆಗೆರೆ ನೆಲೆಗಳಾಗಿವೆ.ಈ ನೆಲೆಗಳಲ್ಲಿ ವರ್ತುಲಕಾರ, ಅಪರೂಪವಾಗಿ ಆಯತಾಕಾರ, ವೃತ್ತಾಕಾರ ಹಾಗೂ ಚೌಕಾಕಾರದ ಗುಡಿಸಲು ನಿರ್ಮಾಣದ ಬಗ್ಗೆ ಮಾಹಿತಿಗಳು ದೊರಕಿವೆ ಹಾಗೂ ಬ್ರಹ್ಮಗಿರಿಯಲ್ಲಿ ಗುಡಿಸಲು ನಿರ್ಮಿಸಲು ಮರದ ಕಂಬಗಳನ್ನು ನೆಡಲು ಮಾಡಿರುವ ಗುಳಿಗಳು ನೀಳವಾದ ಸಾಲಿನಲ್ಲಿ ಕಂಡುಬಂದರೆ, ಮಸ್ಕಿ ನೆಲೆಯಲ್ಲಿ ದರ್ಮಸ್ಸು ಮಾಡಿದ ಮಣ್ಣಿನ ನೆಲಗಟ್ಟು, ಮರದ ಕಂಬ ನೆಡಲು ಮಾಡಿರುವ ಕುಳಿಗಳು ಕಂಡುಬಂದಿವೆ. ಈ ನಿಟ್ಟಿನಲ್ಲಿ ಈ ನೆಲೆಯ ಬಗ್ಗೆ ಹೆಚ್ಚಿನ ಅಧ್ಯಯನದ ಅಗತ್ಯತೆ ಇದೆ ಎಂದು ಹೇಳಬಹುದು.

ಇಂಥಹ ಸುಮಾರು 2800 ಅಡಿ ಎತ್ತರವಾದ ಗುಡ್ಡದ ಮೇಲಿನ ಅಪರೂಪದ ಶಿಲಾಯುಗದ ಮಾನವನ ನೆಲೆ ಇಂದು ಅವನತಿ ಸ್ಥಿತಿಯಲ್ಲಿದೆ. ಯುವ ಪ್ರವಾಸಿಗರು ಬಂದು ಇಲ್ಲಿ ತಂಗಿ ಅವರ ಹಸ್ತಾಕ್ಷರಗಳನ್ನು ವಿವಿಧ ಬಣ್ಣಗಳಲ್ಲಿ ಬರೆದು, ಪವಿತ್ರ ಸ್ಥಳವನ್ನು ಬಾಟಲ್, ಪ್ಲಾಸ್ಟಿಕ್ ಇತರ ಅಸಹ್ಯಕರ ಪದಾರ್ಥಗಳಿಂದ ಮಲಿನಗೊಳಿಸುತ್ತಿದ್ದಾರೆ. ಸಂಬಂಧಪಟ್ಟ ಇಲಾಖೆ ಇಂಥ ಗಮನ ಹರಿಸಬೇಕಿದೆ.
ಕ್ಷೇತ್ರಕಾರ್ಯದಲ್ಲಿ ಉಪನ್ಯಾಸಕರಾದ ಸಂತೋಷ.ಎ, ಹಿರಿಯ ಎನ್.ಎಸ್.ಎಸ್.ಸ್ವಯಂಸೇವಕರಾದ ಚರಣ್‌ಕುಮಾರ್.ಬಿ.ಎಸ್,ಎ.ಆರ್.ವಿಕಾಸ್ ಹಾಗೂ ಸ್ಥಳೀಯರಾದ ಸಿ.ಡಿ.ಪ್ರತಾಪ್‌ರವರ ಸಹಕಾರಕ್ಕೆ ಧನ್ಯವಾದಗಳು.

**ಪರಾಮರ್ಶನ ಗ್ರಂಥಗಳು**

1. ಪಪ್ಪು.ಆರ್.ಎಸ್.ಅರ್ಲಿಸ್ಟೋನ್‌ಏಜ್ ಇನ್ ಕರ್ನಾಟಕ, ಆರ್ಕಿಯಾಲಜಿ ಆಫ್ ಕರ್ನಾಟಕ ಎಡಿಟೆಡ್, ನರಸಿಂಹಮೂರ್ತಿ ಎ.ವಿ. 1978.
2. ಶೇಷಾದ್ರಿ.ಎಂ.ನರಸೀಪುರ– ಟಿ ಮತ್ತು ಜಡಿಗೇನಹಳ್ಳಿ ಉತ್ಖನನ ವರದಿಗಳು 1971, 1960.
3. ರಾಮದಾಸರೆಡ್ಡಿ.ಎಸ್.ಜಿ. ವೇದಾವತಿ ನದಿ ತೀರದ ಸಾಂಸ್ಕೃತಿಕ ಒಂದು ಅಧ್ಯಯನ–2006(ಅಪ್ರಕಟಿತ ಪ್ರೌಢಪ್ರಬಂಧ)

4. ಶಿವತಾರಕ್.ಕೆ.ಬಿ. ಕರ್ನಾಟಕದ ಪುರಾತತ್ವ ನೆಲೆಗಳು ಪು– 34.

5. ಸುಂದರ.ಅ. ಷೇಕ್ಅಲಿ.ಬಿ. 1997, ಪುಟ – 94–95.

6.ಪದ್ದಯ್ಯ.ಕೆ. ಏನ್ಸಿಯಂಟ್ ಆಂಧ್ರ ಹಿಸ್ಟರಿ ಅಂಡ್ ಆರ್ಕಿಯಾಲಜಿ ನ್ಯೂಲೈಟ್ ಆನ್ ದಿ ಅರ್ಲಿ ಆಗ್ರೋ ಪ್ರಾಸ್ಟೋಲ್ ಕಮ್ಯೂನಿಟೀಸ್ ಆಫ್ ಸೌತ್ ಇಂಡಿಯಾ, ಹಿಸ್ಟರಿ ಕಾಂಗ್ರೆಸ್, ಅನಂತಪುರ, 1995,

7.ಸುಬ್ಬರಾವ್.ಬಿ.ಎಕ್ಸ್‌ಕವೇಶನ್ ಅಟ್ ಸಂಗನಕಲ್ಲು – 1948.

8. ಥಾಪರ್.ಬಿ.ಕೆ. ಮಸ್ಕಿ, 1954 ಪುಟ–4, 142.

9. ಆಲ್ಚಿನ್ ಎಫ್.ಆರ್.ಎಕ್ಸ್‌ಕವೇಷನ್ ಅಟ್ ಪಿಕ್ಲಿಹಾಳ್–1960.

10.ಮುಜುಂದಾರ್.ಜಿ.ಜಿ. ರಾಜಗುರು, ಆ್ಯಶ್‌ಮೌಂಡ್ ಎಕ್ಸ್‌ಕವೇಷನ್ ಅಟ್ ಕುಪ್ಪಗಲ್ಲು, 1966.

11.ನಾಗರಾಜರಾವ್.ಎಂ.ಎಸ್,ಪ್ರೋಟೋ ಹಿಸ್ಟಾರಿಕ್ ಕಲ್ಚರ್ಸ್ ಆಫ್ ದಿ ತುಂಗಭದ್ರ ವ್ಯಾಲಿ, 1984.

12.ಹನುಮಂತರಾವ್.ಎಂ, ನಾಗರಾಜ್.ಎಸ್. ಎಕ್ಸ್‌ಕವೇಷನ್ ಅಟ್ ಹೆಮ್ಮಿಗೆ, 1974.

13.ಕೃಷ್ಣ.ಎಂ.ಹೆಚ್. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್, 1929.

14.ಶೇಷಾದ್ರಿ.ಎಂ.ಎ ರಿಪೋರ್ಟ್ ಆನ್ ದಿ ಎಕ್ಸ್‌ಕವೇಷನ್ ಅಟ್ ಟಿ.ನರಸೀಪುರ, 1971.

15.ರವಿಕೋರಿ ಶೆಟ್ಟರ್,ವೆಂಕಟಸುಬ್ಬಯ್ಯ ಅಂಡ್ ಡೊರಿಯನ್ ಕ್ಯೂಪುಲ್ಲರ್, ಬ್ರಹ್ಮಗಿರಿ ಅಂಡ್ ಬಿಯಾಂಡ್, ದಿ ಆರ್ಕಿಯಾಲಜಿ ಆಫ್ ದಿ ಸರ್ದನ್ ನಿಯೋಲಿಥಿಕ್ಸ್, 2001, ಪುಟ – 151.

16.ನಾಗರಾಜರಾವ್, ಇತರರು – ಪೂರ್ವೋಕ್ತ – 1965– ಪುಟ–3.

17.ರಾಮಿರೆಡ್ಡಿ.ವಿ. ಎ ಸ್ಟಡಿ ಆಫ್ ದಿ ನಿಯೋಲಿಥಿಕ್ ಕಲ್ಚರ್ಸ್ ಆಫ್ ಸೌತ್ ವೆಸ್ಟ್ರನ್ ಆಂಧ್ರಪ್ರದೇಶ, 1978.

18.ಡಾ. ರಾಮದಾಸರೆಡ್ಡಿ, ಎಸ್.ಜಿ. ಕ್ಷೇತ್ರಕಾರ್ಯ,2011–ಪುಟ–241–243.

19.ಡಾ. ರಾಮದಾಸರೆಡ್ಡಿ, ಎಸ್.ಜಿ. ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ–2010.

20.ನಾಗರಾಜರಾವ್.ಎಂ.ಎಸ್. ತೆಕ್ಕಲಕೋಟೆ, ಪೂರ್ವೋಕ್ತ. ಪು– 81.

21.ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ –22–07–2017.

22.ದಿ ಟೈಮ್ಸ್ ಆಪ್ ಇಂಡಿಯಾ–15–07–2017.

23.ಕನ್ನಡ ಪ್ರಭ ದಿನ ಪತ್ರಿಕೆ–13–07–2017.

24.ಆಂದೋಲನಾ ದಿನ ಪತ್ರಿಕೆ–14–07–2017.